**ದಿನಾಂಕಃ 26.10.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಈ ಕೆಳಕಂಡ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| | |
|---|---|
| ನಿ.ಪಿ.11 | ಒಳರೋಗಿ ದಾಖಲೆ |
| ನಿ.ಪಿ.12 ಮತ್ತು 13 | ಹೊರರೋಗಿ ದಾಖಲೆ ಗಳು |
| ನಿ.ಪಿ.14 | ಎಕ್ಸರೇ ಹಾಗೂ ವರದಿ |

<u>ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದಃ</u>

1. ಅರ್ಜಿದಾರರಿಗೆ ಚಿಕಿತ್ಸೆಯನ್ನು ಡಾಃ ರಾಕೇಶ್ ರವರು ನೀಡಿರುತ್ತಾರೆ. ಅವರು ಈಗ ಹಾಸ್ ಮಟ್ ಅಸ್ಪತ್ರೆಯಲ್ಲಿ ಇರುವುದಿಲ್ಲ. ಅರ್ಜಿದಾರರ ವೈದ್ಯಕೀಯ ದಾಖಲೆ ಹಾಗೂ ಕ್ಷ ಕಿರಣದ ದಾಖಲೆಯನ್ನು ನಾನು ನೋಡಿರುತ್ತೇನೆ. ಅರ್ಜಿದಾರರು ಟೈಲರಿಂಗ್ ವೃತ್ತಿ ಹೊರತುಪಡಿಸಿ ಅವರು ಕುಳಿತುಕೊಂಡು ಕೆಲಸವನ್ನು ಮಾಡಬಹುದು. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿರದ ಕಾರಣ ಸರಿಯಾದ ರೀತಿಯಲ್ಲಿ ಅಂಗನ್ಯೂನತೆ ಪರೀಕ್ಷಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಶೇ 13 ರಷ್ಟು ಸಂಪೂರ್ಣ ದೇಹಕ್ಕೆ ಅಂಗನ್ಯೂನತೆ ಬರುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಸಹಾಯ ಮಾಡಲು ಅಂಗನ್ಯೂನತೆಯನ್ನು ಹೆಚ್ಚಿನ ಪ್ರಮಾಣದಲ್ಲಿ ತಿಳಿಸಿರುತ್ತೇನೆಂದರೆ ಸರಿಯಲ್ಲ.

2. ಅರ್ಜಿದಾರರಿಗೆ ಅದಂತಹ ಮೂಳೆ ಮುರಿತ ಕೂಡಿಕೊಂಡಿರುತ್ತದೆ. ಅರ್ಜಿದಾರರಿಗೆ ಒಳಜೋಡಣೆ ತೆಗೆಯಲು ರೂ 65 ಸಾವಿರ ವೆಚ್ಚ ಅಗುತ್ತದೆಂದು ತೋರಿಸಲು ಪ್ರತ್ಯೇಕ ದಾಖಲೆ ಹಾಜರು ಪಡಿಸಿರುವುದಿಲ್ಲ. ಒಳಜೋಡಣೆಯನ್ನು ತೆಗೆದ ಬಳಿಕ ಅವರಿಗೆ ನಾನು ತಿಳಿಸಿದಂತೆ ಅಂಗನ್ಯೂನತೆ ಕಡಿಮೆಯಾಗುವ ಸಾಧ್ಯತೆ ಇದೆಯೆಂದರೆ ಸರಿಯಲ್ಲ. ಒಳಜೋಡಣೆ ತೆಗೆದ ಬಳಿಕ ಅವರ ಅಂಗನ್ಯೂನತೆಯ ಪ್ರಮಾಣ ಕಡಿಮೆ ಅಗುತ್ತದೆ ಎಂದು ತಿಳಿದು ಸಹ ಅಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡದ ಕಾರಣ ನಾನು ತಿಳಿಸಿರುವ ಅಂಗನ್ಯೂನತೆ ಹೆಚ್ಚಿನ ಪ್ರಮಾಣದದಲ್ಲಿದೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು